ದಿನಾಂಕ : 23.05.2011 ರ ಸೋಮವಾರ ಪೂರ್ವಾಹ್ನ 11.30 ಗಂಟೆಗೆ ಪ್ರಾಧಿಕಾರದ ಅಧ್ಯಕ್ಷರಾದ ಮಾನ್ಯ ಶ್ರೀ ಸುನಿಲ್ ಕೃಷ್ಣ.ಪಿ. ರವರ ಅಧ್ಯಕ್ಷತೆಯಲ್ಲಿ ಪ್ರಾಧಿಕಾರದ ಕಛೇರಿ ಸಭಾಂಗಣದಲ್ಲಿ ನಡೆದ ಪ್ರಾಧಿಕಾರದ ಸಭೆಯ ನಡಾವಳಿಗಳು.

| ಕ್ರ. ಸಂ | ಹಾಜರಿದ್ದ ಸದಸ್ಯರು | ಗೈರು ಹಾಜರಿದ್ದ ಸದಸ್ಯರು |
|---|---|---|
| 1. | ಶ್ರೀ ಸುನಿಲ್ ಕೃಷ್ಣ .ಪಿ ರವರು, ಅಧ್ಯಕ್ಷರು<br>ನಗರಾಭಿವೃದ್ಧಿ ಪ್ರಾಧಿಕಾರ, ಮಡಿಕೇರಿ. | ಮಾನ್ಯ ಶ್ರೀ ಕೆ.ಜಿ.ಬೋಪಯ್ಯ ರವರು, ಸದಸ್ಯರು<br>ವಿಧಾನ ಸಭಾ ಪತಿಗಳು ಹಾಗೂ ವಿಧಾನಸಭಾ ಸದಸ್ಯರು, ವಿರಾಜಪೇಟೆ ಕ್ಷೇತ್ರ, |
| 2. | ಮಾನ್ಯಜಿಲ್ಲಾಧಿಕಾರಿಯವರು, (ಪದನಿಮಿತ್ತ) ಸದಸ್ಯರು<br>ಕೊಡಗು ಜಿಲ್ಲೆ, ಮಡಿಕೇರಿ. | ಮಾನ್ಯ ಶ್ರೀ ಅಪ್ಪಚ್ಚುರಂಜನ್ ರವರು, ಸದಸ್ಯರು<br>ವಿಧಾನ ಸಭಾ ಸದಸ್ಯರು, ಮಡಿಕೇರಿ ಕ್ಷೇತ್ರ, |
| 3. | ಮಾನ್ಯ ಆರಕ್ಷಕ ಅಧೀಕ್ಷಕರು, ಸದಸ್ಯರು<br>ಕೊಡಗು ಜಿಲ್ಲೆ, ಮಡಿಕೇರಿ. | ಮಾನ್ಯ ಶ್ರೀ ಎಂ.ಸಿ.ನಾಣಯ್ಯ ರವರು, ಸದಸ್ಯರು<br>ವಿಧಾನ ಪರಿಷತ್ ಸದಸ್ಯರು, ಮಡಿಕೇರಿ. |
| 4. | ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಸದಸ್ಯರು<br>ಕಲ್ಯಾಣಾಧಿಕಾರಿಗಳು, ಕೊಡಗು ಜಿಲ್ಲೆ ಮಡಿಕೇರಿ. | ಮಾನ್ಯ ಶ್ರೀ ಟಿ.ಜಾನ್ ರವರು, ಸದಸ್ಯರು<br>ವಿಧಾನ ಪರಿಷತ್ ಸದಸ್ಯರು, ಮಡಿಕೇರಿ. |
| 5. | ಪೌರಾಯುಕ್ತರು, ಸದಸ್ಯರು<br>ನಗರಸಭೆ, ಮಡಿಕೇರಿ. | ಕಾರ್ಯಪಾಲಕ ಅಭಿಯಂತರರು ಸದಸ್ಯರು<br>ಲೋಕೋಪಯೋಗಿ ಇಲಾಖೆ, ಮಡಿಕೇರಿ. |
| 6. | ಸಹಾಯಕ ನಿರ್ದೇಶಕರು, ನ.ಯೋ.ಸದಸ್ಯರು<br>ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಮಡಿಕೇರಿ. | ಕಾರ್ಯಪಾಲಕ ಅಭಿಯಂತರರು ಸದಸ್ಯರು<br>ಚೆಸ್ಕಾಂ, ಮಡಿಕೇರಿ. |
| 7. | ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಆಹ್ವಾನಿತರು<br>ಮಡಿಕೇರಿ ಉಪ ವಿಭಾಗ, ಮಡಿಕೇರಿ. | ಕಾರ್ಯಪಾಲಕ ಅಭಿಯಂತರರು ಸದಸ್ಯರು<br>ಕೆ.ಯು.ಡಬ್ಲ್ಯೂ.ಎಸ್ ಅಂಡ್ ಡಿ.ಬಿ, ಮೈಸೂರು. |
| 8. | ಶ್ರೀ ಅಜಾದ್ ಉರ್ ರೆಹಮಾನ್ ಷರೀಫ್ ಆಯುಕ್ತರು<br>ನಗರಾಭಿವೃದ್ಧಿ ಪ್ರಾಧಿಕಾರ, ಮಡಿಕೇರಿ. | ಕಾರ್ಯಪಾಲಕ ಅಭಿಯಂತರರು ಆಹ್ವಾನಿತರು<br>ಕರ್ನಾಟಕ ಗೃಹ ಮಂಡಳಿ, ಮೈಸೂರು. |
| | | ವಿಭಾಗೀಯ ನಿಯಂತ್ರಕರು, ಆಹ್ವಾನಿತರು<br>ಕೆ.ಎಸ್.ಆರ್.ಟಿ.ಸಿ. ಮಂಗಳೂರು ವಿಭಾಗ, ಮಂಗಳೂರು. |
| | | ಜಂಟಿ ನಿರ್ದೇಶಕರು, ಆಹ್ವಾನಿತರು<br>ಜಿಲ್ಲಾ ಕೈಗಾರಿಕಾ ಕೇಂದ್ರ, ಮಡಿಕೇರಿ. |

ಪ್ರಾಧಿಕಾರದ ಆಯುಕ್ತರು ಸಭೆಯಲ್ಲಿ ಹಾಜರಿದ್ದ ಅಧ್ಯಕ್ಷರು, ಪ್ರಾಧಿಕಾರದ ಸದಸ್ಯರುಗಳು ಹಾಗೂ ಆಹ್ವಾನಿತರುಗಳನ್ನು ಸಭೆಯಲ್ಲಿ ಸ್ವಾಗತಿಸುತ್ತಾ ಸಭಾ ಕಾರ್ಯಕ್ರಮವನ್ನು ಪ್ರಾರಂಭಿಸಲಾಯಿತು.

**1) <u>ವಿಷಯ ಸಂಖ್ಯೆ : 1</u>**

ಹಿಂದಿನ ಸಭೆಯ (ದಿನಾಂಕ 31.03.2011ರ ಸಭೆಯ) ನಡಾವಳಿಯನ್ನು ಓದಿ ಅಂಗೀಕರಿಸುವುದು.

**ನಿರ್ಣಯ:–** ಹಿಂದಿನ ಸಭೆಯ ನಡಾವಳಿಯನ್ನು ಓದಿ ಅಂಗೀಕರಿಸಲಾಯಿತು.

**2) ವಿಷಯ ಸಂಖ್ಯೆ 2**

2011ನೇ ಮಾರ್ಚ್ ಮತ್ತು ಏಪ್ರಿಲ್ ತಿಂಗಳ ಜಮಾ ಖರ್ಚುಗಳನ್ನು ಅಂಗೀಕರಿಸುವ ಬಗ್ಗೆ

**ಟಿಪ್ಪಣಿ:**– ಜಮಾ ಖರ್ಚುಗಳ ವಿವರ ಈ ಕೆಳಗಿನಂತಿವೆ.

| | | | |
|---|---|---|---|
| 1. | ಪರಿಶೀಲನಾ ಶುಲ್ಕ. | ರೂ. | 55,944.00 |
| 2. | ಕೆ.ಟಿ.ಸಿ.ಪಿ ಕಾಯ್ದೆ 1961ರ ಕಲಂ 18ರಡಿ ಪಾವತಿಸಿಕೊಂಡಿರುವ ಶುಲ್ಕ | ರೂ. | 4,203.00 |
| 3. | ಪಾರ್ಕ್ ಮತ್ತು ಸಿ.ಎ. ನಿವೇಶನದಿಂದ ವಿನಾಯಿತಿ ಶುಲ್ಕ | ರೂ. | 66,000.00 |
| 4. | ಪತ್ರಿಕಾ ಪ್ರಕಟಣೆ | ರೂ. | 10,000.00 |
| 5. | ಇತರೆ ಜಮೆ | ರೂ. | 350.00 |
| 6. | ಒಟ್ಟು ಜಮೆ | ರೂ. | 1.36.497.00 |

ಖರ್ಚು

| | | | |
|---|---|---|---|
| 1. | ಅಧ್ಯಕ್ಷರ ಗೌರವಧನ ಮತ್ತು ಇತರೆ ಭತ್ಯೆ | ರೂ. | 40,180.00 |
| 2. | ಆಯುಕ್ತರ ವೇತನ ಮತ್ತು ಇತರೆ ಭತ್ಯೆಗಳು | ರೂ. | 47,516.00 |
| 3. | ಸಿಬ್ಬಂದಿ ವೇತನ | ರೂ. | 39,438.00 |
| 4. | ದೂರವಾಣಿ ವೆಚ್ಚ | ರೂ. | 1,704.00 |
| 5. | ವಿದ್ಯುಚ್ಛಕ್ತಿ ದುರಸ್ತಿ ಮತ್ತು ವಿದ್ಯುಚ್ಛಕ್ತಿ ವೆಚ್ಚ | ರೂ. | 295.00 |
| 6. | ಸಭಾ ಉಪಹಾರ ವೆಚ್ಚ | ರೂ. | 1,000.00 |
| 7. | ಆಯುಕ್ತರ ಪ್ರಯಾಣ ಭತ್ಯೆ | ರೂ. | 2,400.00 |
| 8. | ಅಂಚೆ ಚೀಟಿ ಖರೀದಿ | ರೂ. | 1,000.00 |
| 9. | ಪತ್ರಿಕಾ ಖರೀದಿ ವೆಚ್ಚ | ರೂ. | 900.00 |
| 10. | ಜಾಗೃತಿ ಪ್ರಚಾರ ಬ್ಯಾನರ್ ಬರೆದು ಅಳವಡಿಸಿರುವುದು | ರೂ. | 1,950.00 |
| 11. | ಪತ್ರಿಕಾ ಪ್ರಕಟಣೆ ವೆಚ್ಚ | ರೂ. | 3,922.00 |
| 12. | ಮಹಾ ಯೋಜನೆಯ (ಪ–1) ತಯಾರಿಕೆ ಖರ್ಚು + ಮಹಾ ಯೋಜನೆಯನ್ನು ಸರ್ಕಾರಕ್ಕೆ ಸಲ್ಲಿಸಲು ವಾಹನ ಬಾಡಿಗೆ ವೆಚ್ಚ | ರೂ. | 22,808.00 |
| 13. | ಇತರೆ ವೆಚ್ಚ | ರೂ. | 24.00 |
| 14. | ಒಟ್ಟು ವೆಚ್ಚ. | ರೂ. | 1.63.137.00 |

**ಘೋಷ್ವಾರೆ:**

| | | | |
|---|---|---|---|
| 1. | ಮಾರ್ಚ್ 2011ರ ಪ್ರಾರಂಭಿಕ ಶಿಲ್ಕು | ರೂ. | 21,00,359.00 |
| 2. | 2011 ಮಾರ್ಚ್ ಏಪ್ರಿಲ್ ತಿಂಗಳ ಜಮೆ | ರೂ. | 1,36,497.00 |
| 3. | ಒಟ್ಟು ಜಮೆ | ರೂ. | 22,36,856.00 |
| 4. | 2011 ಮಾರ್ಚ್ ಏಪ್ರಿಲ್ ತಿಂಗಳ ಖರ್ಚು | ರೂ. | 1,63,137.00 |
| 5. | 2011 ಏಪ್ರಿಲ್ ತಿಂಗಳ ಅಖೈರು ಶಿಲ್ಕು | ರೂ. | 20,73,719.00 |
| 6. | ಠೇವಣಿ ಇಟ್ಟಿರುವುದು | ರೂ. | 14,00,000.00 |
| 7. | 2011 ಏಪ್ರಿಲ್ ತಿಂಗಳ ಅಂತ್ಯಕ್ಕೆ ಉಳಿತಾಯ ಖಾತೆಯಲ್ಲಿರುವ ಶಿಲ್ಕು | ರೂ. | 6,73,719.00 |

ಮೇಲಿನ ಜಮಾ ಮತ್ತು ಖರ್ಚುಗಳಿಗೆ ಸಭೆಯ ಅಂಗೀಕಾರಕ್ಕಾಗಿ ಸಲ್ಲಿಸಿದೆ.

**ನಿರ್ಣಯ:**–ಮೇಲಿನ ಜಮಾ ಖರ್ಚುಗಳಿಗೆ ಸಭೆಯು ಅಂಗೀಕಾರ ನೀಡಿತು.

**3) ವಿಷಯ ಸಂಖ್ಯೆ 3:- ಕಛೇರಿಗೆ ಹೊರಗುತ್ತಿಗೆ ಮೂಲಕ ನೇಮಿಸಿಕೊಂಡಿರುವ ಕಂಪ್ಯೂಟರ್ ಆಪರೇಟರ್ ಮತ್ತು 'ಡಿ' ಗ್ರೂಪ್ ನೌಕರರನ್ನು ಮುಂದುವರಿಸುವ ಬಗ್ಗೆ.**

**ಟಿಪ್ಪಣಿ:-** ಈ ಪ್ರಾಧಿಕಾರಕ್ಕೆ ಕಂಪ್ಯೂಟರ್ ಆಪರೇಟರ್ ಮತ್ತು 'ಡಿ' ಗ್ರೂಪ್ ನೌಕರರನ್ನು ಹೊರಗುತ್ತಿಗೆ ಮೂಲಕ 1 ವರ್ಷದ ಅವಧಿಯವರೆಗೆ ನೇಮಿಸಿಕೊಂಡು ಕ್ರಮವಾಗಿ ರೂ. 5,200/- ಮತ್ತು ರೂ. 4,800/- ಗಳನ್ನು ಪಾವತಿಸುತ್ತಿರುವುದಾಗಿದೆ. ಇವರುಗಳ ಸೇವೆಯು ಪ್ರಾಧಿಕಾರಕ್ಕೆ ಅತ್ಯಾವಶ್ಯಕವಾಗಿರುವುದರಿಂದ ಪ್ರಾಧಿಕಾರದಲ್ಲಿ ಮುಂದುವರಿಸಿಕೊಂಡು ಹೋಗಲು ಸಭಾ ಅನುಮೋದನೆಗಾಗಿ ಮಂಡಿಸಲಾಗಿದೆ.

**ನಿರ್ಣಯ:-** ಈಗಾಗಲೇ ಹೊರಗುತ್ತಿಗೆ ಮೂಲಕ ನೇಮಿಸಿಕೊಂಡು ನೀಡುತ್ತಿರುವ ವೇತನವನ್ನೇ ಮುಂದುವರಿಸುತ್ತಾ ನೇಮಕಾತಿ ಅವಧಿ ಮುಗಿದ ನಂತರ ನವೀಕರಿಸಿಕೊಂಡು ಪ್ರಾಧಿಕಾರದಲ್ಲೇ ಮುಂದುವರೆಸಿಕೊಂಡು ಹೋಗಲು ಸಭೆಯು ಅಂಗೀಕಾರ ನೀಡಿತು.

**4) ವಿಷಯ ಸಂಖ್ಯೆ 4:- ಅರ್ಜಿದಾರರು ಶ್ರೀ ಕೆ.ಪಿ.ಮೊಹಮ್ಮದ್ ಸಲೀಂ**

ಮಡಿಕೇರಿ ತಾಲ್ಲೂಕು, ಕರ್ಣಂಗೇರಿ ಗ್ರಾಮದ ಸರ್ವೆ ನಂ. 302/1, 302/2 ರಲ್ಲಿರುವ ಒಟ್ಟು ವಿಸ್ತೀರ್ಣ 4.16 ಎಕರೆ ಜಮೀನನ್ನು ಕೃಷಿ ವಲಯದಿಂದ ವಸತಿ ಉಪಯೋಗಕ್ಕೆ ಭೂ ಉಪಯೋಗ ಬದಲಾವಣೆ ಮಾಡಿಕೊಡುವಂತೆ ಶ್ರೀ ಕೆ.ಪಿ.ಮೊಹಮ್ಮದ್ ಸಲೀಂ, ತಂದೆ: ಖಾದರ್ ಹಾಜಿ, ಮಡಿಕೇರಿ ರವರು ದಿನಾಂಕ: 03.03.2011ರಂದು ಕೋರಿರುತ್ತಾರೆ.

**ಟಿಪ್ಪಣಿ:-** ಸ್ಥಳ ಪರಿಶೀಲಿಸಲಾಗಿ ಪ್ರಸ್ತಾವಿತ ಜಮೀನು ಮಡಿಕೇರಿ ನಗರದ ಅನುಮೋದಿತ ಮಹಾ ಯೋಜನೆಯನ್ವಯ ಕೃಷಿ ವಲಯದಲ್ಲಿ ಬರುತ್ತದೆ. ಹಾಗೂ ಹಾಲಿ 9.00ಮೀ ಅಗಲದ ರಸ್ತೆಯಿಂದ ಸಂಪರ್ಕವನ್ನು ಹೊಂದಿರುತ್ತದೆ. ಸದರಿ ಜಮೀನನ್ನು ವಸತಿ ಉಪಯೋಗಕ್ಕೆ ಭೂ ಉಪಯೋಗ ಬದಲಾವಣೆ ಮಾಡುವ ಬಗ್ಗೆ ಕೆ.ಟಿ.ಸಿ.ಪಿ ಕಾಯ್ದೆ 1961ರ ಕಲಂ 14(ಎ) ರಂತೆ ಸಾರ್ವಜನಿಕರಿಂದ ಆಕ್ಷೇಪಣೆ/ಸಲಹೆಗಳನ್ನು ಆಹ್ವಾನಿಸಲಾಗಿ ನಿಗದಿತ ಕಾಲಾವಕಾಶದೊಳಗೆ ಯಾರಿಂದಲೂ ಆಕ್ಷೇಪಣೆ/ಸಲಹೆಗಳನ್ನು ಸ್ವೀಕರಿಸಿರುವುದಿಲ್ಲ. ಪ್ರಸ್ತಾವನೆಯನ್ನು ಸಭಾ ಅನುಮೋದನೆಗಾಗಿ ಮಂಡಿಸಲಾಗಿದೆ.

**ನಗರ ಯೋಜನಾ ಸದಸ್ಯರ ಅಭಿಪ್ರಾಯ:-** ಸದರಿ ಜಾಗವು ಅನುಮೋದಿತ ಮಹಾ ಯೋಜನೆಯ ರೀತ್ಯಾ ಕೃಷಿ ವಲಯದಲ್ಲಿ ಬರುವುದರಿಂದ ಹಾಗೂ ಸ್ಥಳ ಪರಿಶೀಲಿಸಲಾಗಿ ಯಾವುದೇ ಕೃಷಿ ಚಟುವಟಿಕೆಗಳು ಬಂದಿರುವುದಿಲ್ಲ. ಅರ್ಜಿದಾರರ ಕೋರಿಕೆಯಂತೆ ಸದರಿ ಜಮೀನನ್ನು ಕೃಷಿ ವಲಯದಿಂದ ವಸತಿ ಉಪಯೋಗಕ್ಕೆ ಭೂ ಉಪಯೋಗ ಬದಲಾವಣೆ ಕುರಿತು ಸರ್ಕಾರಕ್ಕೆ ಶಿಫಾರಸ್ಸು ಮಾಡಬಹುದಾಗಿದೆ. ವಿಷಯವನ್ನು ಸಭೆಯ ಚರ್ಚೆ ಹಾಗೂ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿದೆ.

**ನಿರ್ಣಯ:-** ಪ್ರಾಧಿಕಾರವು 1988ನೇ ಜೂನ್ ತಿಂಗಳಲ್ಲಿ ಅಸ್ತಿತ್ವಕ್ಕೆ ಬಂದಿದ್ದು, ಬಂದಲ್ಲಿಂದ ಈವರೆವಿಗೂ ಯಾವುದೇ ವಿನ್ಯಾಸವನ್ನು ರಚಿಸಿ ಅಭಿವೃದ್ಧಿ ಪಡಿಸಿ ಯಾರೊಬ್ಬರಿಗೂ ಯಾವುದೇ ನಿವೇಶನಗಳನ್ನು ಹಂಚಿರುವುದಿಲ್ಲ. ಮಡಿಕೇರಿ ನಗರವು ಗಿರಿ ಕಂದರ, ಬೆಟ್ಟಗುಡ್ಡಗಳಿಂದ ಕೂಡಿದ್ದು, ವಿನ್ಯಾಸ ರಚಿಸಲು ಯೋಗ್ಯವಾದ ಜಮೀನಿನ(ಸರ್ಕಾರಿ ಜಮೀನು) ಅಲಭ್ಯತೆಯಿಂದಾಗಿ ಹಾಗೂ ಪ್ರಾಧಿಕಾರದ ಆರ್ಥಿಕ ಅನಾನುಕೂಲತೆಯಿಂದ ಯಾವುದೇ ಭೂಮಿಯನ್ನು ಸ್ವಾಧೀನ ಪಡಿಸಿಕೊಂಡು/ಖರೀದಿಸಿ ಅಭಿವೃದ್ಧಿ ಪಡಿಸಿ ಸಾರ್ವಜನಿಕರಿಗೆ ನಿವೇಶನಗಳನ್ನು ಹಂಚಲು ಸಾಧ್ಯವಾಗಿರುವುದಿಲ್ಲ. ಮಡಿಕೇರಿ ನಗರದಲ್ಲಿ ಕೆಲವೇ ಕೆಲವು ಖಾಸಗಿ ವಿನ್ಯಾಸಗಳು ಪ್ರಾಧಿಕಾರದಿಂದ ಅನುಮೋದನೆಗೊಂಡು ಬೆಳವಣಿಗೆಯಾಗಿರುವ ಪ್ರಕರಣಗಳನ್ನು ಬಿಟ್ಟರೆ ಉಳಿದಂತೆ ಯಾವುದೇ ಖಾಸಗಿ ವಿನ್ಯಾಸಗಳು ಕೂಡ ಅನುಮೋದನೆಯಾಗಿ ಅಭಿವೃದ್ಧಿಗೊಂಡಿರುವುದಿಲ್ಲ. ದಿನೇ ದಿನಕ್ಕೆ ನಗರದ ಜನಸಂಖ್ಯೆಯು ಏರುತ್ತಿದ್ದು ಸಾರ್ವಜನಿಕರಿಗೆ ನಿವೇಶನಗಳನ್ನು ಒದಗಿಸಲು ಪ್ರಾಧಿಕಾರದಿಂದ ಸಾಧ್ಯವಾಗುತ್ತಿಲ್ಲ.

ಆದ್ದರಿಂದ ಖಾಸಗಿ ವ್ಯಕ್ತಿಗಳು ಅಪರೂಪಕ್ಕೆ ವಿನ್ಯಾಸ ಅನುಮೋದನೆ ಕೋರುವ ಪ್ರಕರಣಗಳನ್ನು ತಿರಸ್ಕರಿಸಿದ್ದಲ್ಲಿ ನಗರದ ಬೆಳವಣಿಗೆ ಹಾಗೂ ಸಾರ್ವಜನಿಕರಿಗೆ ಹೆಚ್ಚಿನ ಅನಾನುಕೂಲತೆ ಆಗುವುದರಿಂದ ಜನರ ಹಿತದೃಷ್ಟಿಯನ್ನು ಪರಿಗಣಿಸಿ ನಿಯಮಾನುಸಾರ ಅರ್ಜಿದಾರರು ಕೋರಿರುವ ಕೃಷಿ ಜಮೀನನ್ನು ವಸತಿ ಉಪಯೋಗಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಸರ್ಕಾರಕ್ಕೆ ಶಿಫಾರಸ್ಸು ಮಾಡಬಹುದೆಂದು ಸಭೆಯು ಸರ್ವಾನುಮತದ ಅಂಗೀಕಾರ ನೀಡಿತು.

**5) ವಿಷಯ ಸಂಖ್ಯೆ 5:– ಅರ್ಜಿದಾರರು ಶ್ರೀಮತಿ ವಿನೋದ ಎಂ. ಶೆಟ್ಟಿ**

ಮಡಿಕೇರಿ ತಾಲ್ಲೂಕು, ಕಾಟಕೇರಿ ಗ್ರಾಮದ ಸರ್ವೆ ನಂ. 192/39 ರಲ್ಲಿ ಒಟ್ಟು ವಿಸ್ತೀರ್ಣ 3.70½ ಎಕ್ರೆ ವಿಸ್ತೀರ್ಣದ ಜಮೀನಿನ ಪೈಕಿ 1.50 ಎಕರೆ ಜಮೀನನ್ನು ಕೃಷಿ ವಲಯದಿಂದ ವಾಣಿಜ್ಯ (ಹೋಟೆಲ್ ನಿರ್ಮಿಸಲು) ಭೂ ಉಪಯೋಗ ಬದಲಾವಣೆ ಮಾಡಿಕೊಡುವಂತೆ ಶ್ರೀಮತಿ ವಿನೋದ ಎಂ. ಶೆಟ್ಟಿ ಇವರು ಕೋರಿರುತ್ತಾರೆ.

**ಟಿಪ್ಪಣಿ:–** ಸ್ಥಳ ಪರಿಶೀಲಿಸಲಾಗಿ ಪ್ರಸ್ತಾವಿತ ಜಮೀನು ಮಡಿಕೇರಿ ನಗರದ ಅನುಮೋದಿತ ಮಹಾ ಯೋಜನೆಯನ್ವಯ ಕೃಷಿ ವಲಯದಲ್ಲಿ ಬರುತ್ತದೆ. ಹಾಗೂ ಹಾಲಿ 23ಮೀ ಅಗಲದ ಮಡಿಕೇರಿಯಿಂದ ಮಂಗಳೂರಿಗೆ ಹೋಗುವ ರಾಜ್ಯ ಹೆದ್ದಾರಿಯಿಂದ ಸಂಪರ್ಕವಿರುತ್ತದೆ. ಸದರಿ ಕೃಷಿ ಜಮೀನನ್ನು ಕೃಷಿ ವಲಯದಿಂದ ವಾಣಿಜ್ಯ (ಹೋಟೆಲ್ ನಿರ್ಮಿಸಲು) ಉಪಯೋಗಕ್ಕೆ ಭೂ ಉಪಯೋಗ ಬದಲಾವಣೆ ಮಾಡುವ ಬಗ್ಗೆ ಕೆ.ಟಿ.ಸಿ.ಪಿ ಕಾಯ್ದೆ 1961ರ ಕಲಂ 14(ಎ)ರಂತೆ ಸಾರ್ವಜನಿಕರಿಂದ ಆಕ್ಷೇಪಣೆ/ಸಲಹೆಗಳನ್ನು ಆಹ್ವಾನಿಸಲಾಗಿ ದಿನಾಂಕ: 09.05.2011 ರಂದು ಶ್ರೀ ಎಂ.ಪಿ.ಮುತ್ತಪ್ಪ ಮತ್ತು ಇತರ 12 ಜನರ ಸಹಿ ಇರುವ 1 ಆಕ್ಷೇಪಣಾ ಅರ್ಜಿಯನ್ನು ಸ್ವೀಕರಿಸಲಾಗಿರುತ್ತದೆ. ಆಕ್ಷೇಪಣಾ ಅರ್ಜಿಯೊಂದಿಗೆ ಪ್ರಸ್ತಾವನೆಯನ್ನು ಸಭಾ ಅನುಮೋದನೆಗಾಗಿ ಮಂಡಿಸಲಾಗಿದೆ.

**ನಗರ ಯೋಜನಾ ಸದಸ್ಯರ ಅಭಿಪ್ರಾಯ:–** ಸ್ಥಳ ಪರಿಶೀಲಿಸಲಾಗಿ ಪ್ರಸ್ತಾವಿತ ಜಮೀನಿಗೆ ಹಾಲಿ 20ಮೀ ಅಗಲದ ಮಡಿಕೇರಿಯಿಂದ ಮಂಗಳೂರಿಗೆ ಹೋಗುವ ರಾಜ್ಯ ಹೆದ್ದಾರಿಯಿಂದ 9.00ಮೀ ಅಗಲದ ರಸ್ತೆಯಿಂದ ಸಂಪರ್ಕವನ್ನು ಹೊಂದಿರುತ್ತದೆ. ಪ್ರಸ್ತಾವಿತ ಜಾಗವು ವಾಣಿಜ್ಯ ಉದ್ದೇಶಕ್ಕೆ ಸೂಕ್ತವಾಗಿದ್ದು, ಸದರಿ ಜಮೀನನ್ನು ಕೃಷಿ ವಲಯದಿಂದ ವಾಣಿಜ್ಯ ವಲಯಕ್ಕೆ ಭೂ ಉಪಯೋಗ ಬದಲಾವಣೆ ಮಾಡುವ ಸಂಬಂಧ ಸಭೆಯಲ್ಲಿ ಚರ್ಚಿಸಿ ಸೂಕ್ತ ನಿರ್ಣಯ ಕೈಗೊಳ್ಳಬಹುದಾಗಿರುತ್ತದೆ.

**ನಿರ್ಣಯ:–** ಸದರಿ ಪ್ರಕರಣದ ಬಗ್ಗೆ ಸಭೆಯಲ್ಲಿ ಸುದೀರ್ಘವಾಗಿ ಚರ್ಚಿಸಲಾಯಿತು. ಕೊಡಗನ್ನು ಈಗಾಗಲೇ ಪ್ರವಾಸೋದ್ಯಮ ಜಿಲ್ಲೆಯಾಗಿ ಸರ್ಕಾರವೇ ಘೋಷಿಸಿರುವುದರಿಂದ ಮಡಿಕೇರಿ ನಗರದಲ್ಲಿ ಹೋಟೆಲ್‌ಗಳು ಹಾಗೂ ರೆಸಾರ್ಟ್‌ಗಳು ಬಹಳ ಕಡಿಮೆ ಪ್ರಮಾಣದಲ್ಲಿದ್ದು, ಪ್ರವಾಸಿಗರಿಗೆ ಅನಾನುಕೂಲತೆಗಳು ಅಧಿಕವಾಗುವುದರಿಂದ ಇವುಗಳನ್ನು ಬಗೆಹರಿಸಿ, ಸಾರ್ವಜನಿಕರಿಗೆ ಅನುಕೂಲತೆ ಮಾಡುವ ಹಿತದೃಷ್ಟಿಯಿಂದ ಸದರಿ ಜಮೀನಿನಲ್ಲಿ ಪ್ರಕೃತಿ ಸೌಂದರ್ಯಕ್ಕೆ ಧಕ್ಕೆಯಾಗದ ರೀತಿಯಲ್ಲಿ ವಾಣಿಜ್ಯ ಚಟುವಟಿಕೆಗಳನ್ನು ಅಭಿವೃದ್ಧಿ ಪಡಿಸಲು ಅನುಮತಿ ನೀಡಲು, ಪ್ರಕರಣವನ್ನು ಕೃಷಿ ವಲಯದಿಂದ ವಾಣಿಜ್ಯ ಉಪಯೋಗಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಸರ್ಕಾರಕ್ಕೆ ಶಿಫಾರಸ್ಸು ಮಾಡಬಹುದೆಂದು ಸಭೆಯಲ್ಲಿ ಸರ್ವಾನುಮತದ ಅಂಗೀಕಾರ ನೀಡಲಾಯಿತು.

**6) ವಿಷಯ ಸಂಖ್ಯೆ 6:– ಮಡಿಕೇರಿ ನಗರದ ಗದ್ದಿಗೆ ವ್ಯಾಪ್ತಿಯಲ್ಲಿ ಬರುವ ಜಮೀನಿನಲ್ಲಿ ಪ್ರಾಧಿಕಾರದ ವತಿಯಿಂದ ಅಭಿವೃದ್ಧಿ ಪಡಿಸಲು ಉದ್ದೇಶಿಸಿರುವ ಉದ್ಯಾನವನಕ್ಕೆ ರೂ.20 ಲಕ್ಷ ವೆಚ್ಚದಲ್ಲಿ ಕಾಂಪೌಂಡ್ ನಿರ್ಮಿಸುವ ಬಗ್ಗೆ**

**ಟಿಪ್ಪಣಿ:–** ಉದ್ಯಾನವನಕ್ಕೆ ಕಾಂಪೌಂಡ್ ನಿರ್ಮಿಸುವ ಸಂಬಂಧ ಆಗುವ ಖರ್ಚುಗಳಿಗೆ ಪ್ರಾಚ್ಯ ವಸ್ತು ಹಾಗೂ ಸಂಗ್ರಹಾಲಯಗಳ ನಿರ್ದೇಶನಾಲಯದಿಂದ ಬಿಡುಗಡೆಯಾಗಿರುವ ರೂ. 20ಲಕ್ಷ ಅನುದಾನವನ್ನು ಮಾನ್ಯ ಜಿಲ್ಲಾಧಿಕಾರಿಗಳು ಪ್ರಾಧಿಕಾರಕ್ಕೆ ಹಸ್ತಾಂತರಿಸುವುದಾಗಿಯೂ ಈ ಬಗ್ಗೆ ಟೆಂಡರ್ ಪ್ರಕ್ರಿಯೆಯನ್ನು ಕೈಗೆತ್ತಿಕೊಳ್ಳಬಹುದಾಗಿಯೂ ಅವರನ್ನು ಭೇಟಿ ಮಾಡಿದ ಸಂಧರ್ಭದಲ್ಲಿ ಹೇಳಿರುತ್ತಾರೆ. ಹಾಗೂ ರೂ.20 ಲಕ್ಷ ಅನುದಾನವನ್ನು ಪ್ರಾಧಿಕಾರದ ನಿಧಿಗೆ ಹಸ್ತಾಂತರಿಸಲು ದಿನಾಂಕ: 04.05.2011ರಂದು ಮಾನ್ಯ ಜಿಲ್ಲಾಧಿಕಾರಿಯವರನ್ನು ಕೋರಲಾಗಿರುತ್ತದೆ. ಉದ್ಯಾನವನಕ್ಕೆ ಕಾಂಪೌಂಡನ್ನು ನಿರ್ಮಿಸಲು ಮಾನ್ಯ ಜಿಲ್ಲಾಧಿಕಾರಿಯವರು ಅನುದಾನವನ್ನು ನೀಡಿದ್ದಲ್ಲಿ ಆ ಹಣದಿಂದ ಅಭಿವೃದ್ಧಿ ಪಡಿಸಲಾಗುವುದು. ತಪ್ಪಿದ್ದಲ್ಲಿ ಪ್ರಾಧಿಕಾರದ ನಿಧಿಯಿಂದಲೇ ಹೆಚ್ಚುವರಿ ಹಣವನ್ನು ಉಪಯೋಗಿಸಿಕೊಂಡು ಉದ್ಯಾನವನಕ್ಕೆ ಸಂಬಂಧಪಟ್ಟ ಎಲ್ಲಾ ಪ್ರಕ್ರಿಯೆಯನ್ನು ಕೈಗೆತ್ತಿಕೊಳ್ಳಲಾಗುವುದು. ಈ ಎಲ್ಲಾ ಅಂಶಗಳೊಂದಿಗೆ ಸಭಾ ಅನುಮೋದನೆಗಾಗಿ ಮಂಡಿಸಲಾಗಿದೆ.

**ನಿರ್ಣಯ:–** ಗದ್ದಿಗೆ ವ್ಯಾಪ್ತಿಯಲ್ಲಿ ಉದ್ಯಾನವನ ನಿರ್ಮಿಸುವ ಬಗ್ಗೆ ಈಗಾಗಲೇ ಟೆಂಡರ್ ಪ್ರಕ್ರಿಯೆಯನ್ನು ಪ್ರಾರಂಭಿಸಿದ್ದು ಉದ್ಯಾನವನವನ್ನು ನಿರ್ಮಿಸಿದ ನಂತರ ಅದನ್ನು ಸುರಕ್ಷಿತವಾಗಿ ನಿರ್ವಹಿಸುವ ನಿಟ್ಟಿನಲ್ಲಿ ಕಾಂಪೌಂಡ್‌ನ್ನು ನಿರ್ಮಿಸುವುದು ಅತ್ಯಾವಶ್ಯಕವಾಗಿರುತ್ತದೆ. ಉದ್ಯಾನವನ ಅಭಿವೃದ್ಧಿ ಪಡಿಸುವ ಜಾಗಕ್ಕೆ ಮಾತ್ರ ಕಾಂಪೌಂಡ್ ನಿರ್ಮಿಸುವ ಬಗ್ಗೆ ಮಾನ್ಯ ಜಿಲ್ಲಾಧಿಕಾರಿಯವರು ರೂ. 20ಲಕ್ಷ ಅನುದಾನವನ್ನು ಪ್ರಾಧಿಕಾರದ ನಿಧಿಗೆ ಹಸ್ತಾಂತರಿಸುತ್ತಾರೆಂದು ತಿಳಿಸಿರುವುದರಿಂದ ಈ ಬಗ್ಗೆ ಸಹ ಟೆಂಡರ್ ಪ್ರಕ್ರಿಯೆಯನ್ನು ನಡೆಸಬಹುದೆಂದು ಸಭೆಯಲ್ಲಿ ಆಯುಕ್ತರು ವಿವರವನ್ನು ನೀಡಿದರು. ಇದಕ್ಕೆ ಸಭೆಯು ಒಪ್ಪಿ ಮಾನ್ಯ

ಜಿಲ್ಲಾಧಿಕಾರಿಯವರಿಂದ ಅನುದಾನ ಬರಲು ವಿಳಂಬವಾದಲ್ಲಿ ಪ್ರಾಧಿಕಾರದ ನಿಧಿಯಿಂದಲೇ ಕಾಂಪೌಂಡನ್ನು ನಿರ್ಮಿಸಿ, ಜಿಲ್ಲಾಧಿಕಾರಿಯವರಿಂದ ಬಂದ ಅನುದಾನವನ್ನು ಪ್ರಾಧಿಕಾರದ ನಿಧಿಗೆ ತುಂಬಿಸಿಕೊಳ್ಳಬಹುದೆಂದೂ ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಿ, ರೂ. 20ಲಕ್ಷಗಳಿಗೆ ಆಡಳಿತಾತ್ಮಕ ಮಂಜೂರಾತಿಯನ್ನು ನೀಡಿ ಆಯುಕ್ತರಿಗೆ ಮುಂದಿನ ಕಾರ್ಯ ನಿರ್ವಹಿಸಲು ಸೂಚಿಸಿತು.

**7) ವಿಷಯ ಸಂಖ್ಯೆ 7:- ಅರ್ಜಿದಾರರು ಶ್ರೀ ಬೇಸಲ್ ಮೋಹಮ್ಮದ್ ಶಾಲಿ.**

ಕೊಡಗು ಜಿಲ್ಲೆ, ಮಡಿಕೇರಿ ತಾಲ್ಲೂಕು, ಮದೆನಾಡು ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ ಬರುವ ಕಾಟಕೇರಿ ಗ್ರಾಮದ ಸರ್ವೆ ನಂಬರು 216/12ರಲ್ಲಿರುವ 0.50ಎಕರೆ ವಿಸ್ತೀರ್ಣದ ಜಾಗದಲ್ಲಿ ವಸತಿ ಕಟ್ಟಡ ನಿರ್ಮಿಸಲು ಈ ಪ್ರಾಧಿಕಾರದ ಅನುಮತಿಯನ್ನು ಕೋರಿ ಶ್ರೀ ಬೈಸಲ್ ಮೋಹಮ್ಮದ್ ಶಾಲಿ ರವರು ಅನುಮತಿಯನ್ನು ಕೋರಿ ಅರ್ಜಿ ಸಲ್ಲಿಸಿರುತ್ತಾರೆ.

**ಟಿಪ್ಪಣಿ:-** ಪ್ರಸ್ತಾವಿತ ಜಾಗವನ್ನು ಪರಿಶೀಲಿಸಲಾಗಿ, ಅರ್ಜಿದಾರರು ಈಗಾಗಲೇ ಮದೆ ಗ್ರಾಮ ಪಂಚಾಯಿತಿ ಕಛೇರಿಯಿಂದ ಅನುಮತಿಯನ್ನು ಪಡೆದುಕೊಂಡು ಕಟ್ಟಡ ಕಟ್ಟುತ್ತಿರುವುದು ಕಂಡು ಬಂದಿರುತ್ತದೆ. ಅರ್ಜಿದಾರರು ಸಲ್ಲಿಸಿರುವ ದಾಖಲಾತಿಗಳನ್ನು ಪರಿಶೀಲಿಸಲಾಗಿ, ಆರ್.ಟಿ.ಸಿ ಯಲ್ಲಿ ಮನೆದಳವೆಂದು ನಮೂದು ಇರುವುದು ಕಂಡುಬಂದಿರುತ್ತದೆ. ಸದರಿಯವರು ಈಗಾಗಲೇ ವಸತಿ ಕಟ್ಟಡ ನಿರ್ಮಿಸುತ್ತಿರುವುದರಿಂದ ಪ್ರಾಧಿಕಾರದಿಂದ ಅನುಮತಿ ನೀಡುವ ಬಗ್ಗೆ ಸಭೆಯಲ್ಲಿ ಚರ್ಚಿಸಲು ಕಡತವನ್ನು ಮಂಡಿಸಲಾಗಿದೆ.

**ನಿರ್ಣಯ:-** ಈ ಬಗ್ಗೆ ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಿ, ಅರ್ಜಿದಾರರ ಆರ್.ಟಿ.ಸಿ. ಯಲ್ಲಿ ಮನೆದಳವೆಂದು ನಮೂದು ಇರುತ್ತದೆ. ಮಹಾ ಯೋಜನೆಯ ವಲಯ ನಿಯಮಾವಳಿಗಳನ್ವಯ ಅಭಿವೃದ್ಧಿಯಾಗಿರುವ ಪ್ರದೇಶದಿಂದ 100ಮೀ ವ್ಯಾಪ್ತಿಯಲ್ಲಿ ಸಹಜ ಬೆಳವಣಿಗೆಗೆ ಅವಕಾಶವಿರುವುದರಿಂದಲೂ ಅರ್ಜಿದಾರರು ಕೋರಿರುವ ಜಾಗವು ಹಾಲಿ ಅಭಿವೃದ್ಧಿಯಾಗಿರುವ ಪ್ರದೇಶದಿಂದ 100ಮೀ ವ್ಯಾಪ್ತಿಯಲ್ಲಿದ್ದು, ವಸತಿ ಉಪಯೋಗಕ್ಕೆ ಸೂಕ್ತವಾಗಿರುವುದರಿಂದ ಈ ಜಾಗಕ್ಕೆ ಅನುಮತಿ ಪಡೆಯದೇ ಕಟ್ಟಡದ ಅಭಿವೃದ್ಧಿ ಕಾರ್ಯವನ್ನು ಕೈಗೊಂಡಿರುವುದರಿಂದ ರೂ. 1ಲಕ್ಷ ದಂಡ ಮತ್ತು ನಿಯಮಾನುಸಾರ ಇತರೆ ಶುಲ್ಕವನ್ನು ಪ್ರಾಧಿಕಾರಕ್ಕೆ ಪಾವತಿಸಿಕೊಂಡು ಕಟ್ಟಿರುವ ಕಟ್ಟಡದ ನಕ್ಷೆಗೆ ಅನುಮೋದನೆ ನೀಡಬಹುದೆಂದು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**8) ವಿಷಯ ಸಂಖ್ಯೆ 8:- ಮಡಿಕೇರಿ ನಗರದ ಗದ್ದಿಗೆ ವ್ಯಾಪ್ತಿಯಲ್ಲಿ ಬರುವ ಜಮೀನಿನಲ್ಲಿ ಪ್ರಾಧಿಕಾರದ ವತಿಯಿಂದ ಅಭಿವೃದ್ಧಿ ಪಡಿಸಲು ಉದ್ದೇಶಿಸಿರುವ ಉದ್ಯಾನವನವನ್ನು ನಿರ್ಮಿಸಿದ ನಂತರ, ನಿರ್ವಹಣೆಗೆ ವಾರ್ಷಿಕ ಗುತ್ತಿಗೆ ನೀಡುವ ಬಗ್ಗೆ.**

**ಟಿಪ್ಪಣಿ:-** ಗದ್ದಿಗೆ ವ್ಯಾಪ್ತಿಯ ಉದ್ಯಾನವನದ ನಿರ್ಮಾಣದ ನಂತರ ಅದನ್ನು ನಿರ್ವಹಣೆ ಮಾಡುವುದು ಅತ್ಯವಶ್ಯಕವಾಗಿರುತ್ತದೆ. ಆದ್ದರಿಂದ ವಾರ್ಷಿಕ ನಿರ್ವಹಣೆಗಾಗಿ ಗುತ್ತಿಗೆ ಕರೆದು ನಿರ್ವಹಣಾ ವೆಚ್ಚವನ್ನು ಪ್ರಾಧಿಕಾರದ ವತಿಯಿಂದ ನೀಡಲು ಸಭಾ ಅನುಮೋದನೆಗಾಗಿ ಮಂಡಿಸಿದೆ.

**ನಿರ್ಣಯ:-** ಗದ್ದಿಗೆ ವ್ಯಾಪ್ತಿಯಲ್ಲಿ ಉದ್ಯಾನವನ ಅಭಿವೃದ್ಧಿ ಪಡಿಸಿದ ನಂತರ ಅಭಿವೃದ್ಧಿ ಪಡಿಸುವ ಗುತ್ತಿಗೆದಾರರೇ 2 ತಿಂಗಳ ವರೆಗೆ ಉದ್ಯಾನವನವನ್ನು ನಿರ್ವಹಿಸತಕ್ಕದ್ದಾಗಿರುತ್ತದೆ. ಈ ಅವಧಿ ಮುಗಿದ ನಂತರದ ನಿರ್ವಹಣೆಯೂ ಅತ್ಯಾವಶ್ಯಕವಾಗಿದ್ದು, ವಾರ್ಷಿಕ ನಿರ್ವಹಣೆಗಾಗಿ ಪ್ರತ್ಯೇಕ ಟೆಂಡರ್ ಕರೆಯಬೇಕಾಗಿರುತ್ತದೆ ಎಂದು ಸಭೆಯಲ್ಲಿ ಆಯುಕ್ತರು ತಿಳಿಸಿದರು. ಈ ಬಗ್ಗೆ ಸಭೆಯಲ್ಲಿ ಚರ್ಚಿಸಿ, ಉದ್ಯಾನವನ ನಿರ್ಮಿಸಿದ ನಂತರ ನಿರ್ವಹಿಸುವುದು ಸಹ ಅತಿ ಮುಖ್ಯವಾಗಿರುವುದರಿಂದ ವಾರ್ಷಿಕ ನಿರ್ವಹಣೆಗಾಗಿ ಟೆಂಡರ್ ಕರೆದು ಗುತ್ತಿಗೆ ನೀಡಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು. ಹಾಗೂ ನಿರ್ವಹಣೆ ವೆಚ್ಚವನ್ನು ಪ್ರಾಧಿಕಾರದ ನಿಧಿಯಿಂದಲೇ ಭರಿಸುವಂತೆಯೂ ತೀರ್ಮಾನಿಸಿ ಆಡಳಿತಾತ್ಮ ಮಂಜೂರಾತಿಯನ್ನು ನೀಡಲಾಯಿತು.

9) ವಿಷಯ ಸಂಖ್ಯೆ 9:– ಅಧ್ಯಕ್ಷರ ಅನುಮತಿ ಮೇರೆಗೆ ಇತರ ವಿಷಯಗಳು.

**1. ನಕ್ಷೆಯಲ್ಲಿ ಸಾಯಿಲ್ ಸ್ಟೆಬಲಿಟಿ ಸರ್ಟಿಫಿಕೇಟ್ , ಮಳೆ ನೀರಿನ ಕೊಯ್ಲು, ಸೋಲಾರ್ ಅಳವಡಿಕೆ ಈ ಎಲ್ಲಾ ವಿವರಗಳನ್ನು ಕಟ್ಟಡ ಕಟ್ಟಲು ಅಳವಡಿಸಿಕೊಳ್ಳುವ ಬಗ್ಗೆ**

**ಟಿಪ್ಪಣಿ:–** 1. ಕಟ್ಟಡ ಕಟ್ಟುವ ಮೊದಲು ನಗರಾಭಿವೃದ್ಧಿ ಪ್ರಾಧಿಕಾರದಿಂದ ತಾಂತ್ರಿಕ ಅನುಮೋದನೆ ಪಡೆದುಕೊಳ್ಳುವ ಸಂಧರ್ಭದಲ್ಲಿ ಸದರಿ ನಿವೇಶನದ ಸಾಯಿಲ್ ಸ್ಟೆಬಲಿಟಿ ಸರ್ಟಿಫಿಕೇಟ್ ಬಗ್ಗೆ ಸಂಬಂಧಿಸಿದ ಇಲಾಖೆ/ಇಂಜಿನಿಯರ್ ರವರಿಂದ ಧೃಢೀಕರಣ ಪತ್ರವನ್ನು ಪಡೆದು ಸಲ್ಲಿಸತಕ್ಕದ್ದು.

2. ಮಳೆ ನೀರಿನ ಕೊಯ್ಲಿಗೆ ವ್ಯವಸ್ಥೆ ಮಾಡಿಕೊಳ್ಳತಕ್ಕದ್ದು ಹಾಗೂ ಸಂಬಂಧಿಸಿದ ಕಟ್ಟಡಕ್ಕೆ ಸೋಲಾರ್ ಅಳವಡಿಸಿಕೊಳ್ಳತಕ್ಕದ್ದು ಎಂಬ ಷರತ್ತುಗಳನ್ನು ವಿಧಿಸಿ ತಾಂತ್ರಿಕ ಅಭಿಪ್ರಾಯ ನೀಡಲು ಸಭೆಯ ಅನುಮೋದನೆಗಾಗಿ ಸಲ್ಲಿಸಲಾಗಿದೆ.

**ನಿರ್ಣಯ:–1.** ಕಟ್ಟಡದ ಮಾಲೀಕರು ಪ್ರಾಧಿಕಾರದಿಂದ ಅನುಮತಿ ಪಡೆದುಕೊಳುವ ಮೊದಲು ನಿವೇಶನದ ಸಾಯಿಲ್ ಸ್ಟೆಬಲಿಟಿ ಸರ್ಟಿಫಿಕೇಟ್ (ಮಣ್ಣು ಪರೀಕ್ಷೆ) ಮಾಡುವುದು ಅತ್ಯವಶ್ಯಕವಾಗಿರುತ್ತದೆ. ಗ್ರೌಂಡ್ + 2 ಅಂತಸ್ತಿಗಿಂತ ಹೆಚ್ಚಿನ ಅಂತಸ್ತಿನ ಕಟ್ಟಡವನ್ನು ಕಟ್ಟುವ ನಿವೇಶನದ ಮಾಲೀಕರು ನಿವೇಶನದ ಸಾಯಿಲ್ ಸ್ಟೆಬಲಿಟಿ ಸರ್ಟಿಫಿಕೇಟ್ (ಮಣ್ಣು ಪರೀಕ್ಷೆ) ಮಾಡಿಸಿಕೊಂಡು ಧೃಢೀಕರಣ ಪತ್ರವನ್ನು ಸಲ್ಲಿಸುವುದು ಕಡ್ಡಾಯವಾಗಿರುತ್ತದೆ. ಇದನ್ನು ಸಂಬಂಧಪಟ್ಟ ಸಂಸ್ಥೆ / ಕಾಲೇಜು (ಸುಳ್ಯ, ಮೈಸೂರು, ಸೂರತ್ಕಲ್ ಇಂಜಿನಿಯರಿಂಗ್ ಕಾಲೇಜು ಸಂಸ್ಥೆ)/ಸರ್ಕಾರದಿಂದ ಅನುಮೋದಿಸಲ್ಪಟ್ಟ ಗುತ್ತಿಗೆದಾರರಿಂದ ಪಡೆದುಕೊಳ್ಳಬೇಕಾಗಿರುತ್ತದೆ.

**ಸ್ಟೆಬಿಲಿಟಿ ಸರ್ಟಿಫಿಕೇಟ್ (ಕಟ್ಟಡದ ಭದ್ರತೆ ಬಗ್ಗೆ ಧೃಢೀಕರಣ ಪತ್ರ)** :– ಎರಡಕ್ಕಿಂತ ಹೆಚ್ಚಿನ ಅಂತಸ್ತು ಕಟ್ಟಡ ನಿರ್ಮಿಸುವಾಗ ನೆಲ ಅಂತಸ್ತು ಮೇಲಿನ ಅಂತಸ್ತುಗಳ ಭಾರವನ್ನು ತಡೆಯುವ ಸಾಮರ್ಥ್ಯವನ್ನು ಹೊಂದಿರುವ ಬಗ್ಗೆ ಅರ್ಹ ಇಂಜಿನಿಯರ್‌ರವರಿಂದ ಸ್ಟೆಬಿಲಿಟಿ ಸರ್ಟಿಫಿಕೇಟ್ (ಕಟ್ಟಡದ ಭದ್ರತೆ ಬಗ್ಗೆ ಧೃಢೀಕರಣ ಪತ್ರ)ವನ್ನು ಪಡೆದು ಸಲ್ಲಿಸುವುದು ಕಡ್ಡಾಯಗೊಳಿಸತಕ್ಕದಾಗಿರುತ್ತದೆ.

**2.** ಮಳೆ ನೀರಿನ ಕೊಯ್ಲಿಗೆ ಸಂಬಂಧಿಸಿದಂತೆ, ಮನೆ ಕಟ್ಟುವ ವೇಳೆಯಲ್ಲಿ ಸಲ್ಲಿಸುವ ನೀಲಿ ನಕ್ಷೆಯಲ್ಲಿಯೇ ಮಳೆ ಕೊಯ್ಲಿನ ವಿವರವನ್ನು ವೈಜ್ಞಾನಿಕ ರೀತಿಯಲ್ಲಿ ಅಳವಡಿಸಿ ನಕ್ಷೆ ತಯಾರಿಸುವಂತೆಯೂ ಹಾಗೂ ಕಟ್ಟಡ ನಿರ್ಮಿಸುವ ವೇಳೆಯಲ್ಲಿ ಅದನ್ನು ಕಾರ್ಯಗತಗೊಳಿಸುವಂತೆಯೂ ಮತ್ತು ಸದರಿ ಕಟ್ಟಡಕ್ಕೆ ಸೋಲಾರ್ ಅಳವಡಿಸಿಕೊಳ್ಳುವ ನಿಬಂಧನೆಗಳಿಗೊಳಪಟ್ಟು ತಾಂತ್ರಿಕ ಅಭಿಪ್ರಾಯ ನೀಡುವಂತೆ ಸಭೆಯಲ್ಲಿ ತೀರ್ಮಾನಿಸಲಾಯಿತು.

**ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.**

**ಸಹಿ/–**
**(ಶ್ರೀ ಪಿ.ಸಿ.ಬೆಲ್ ಕೃಷ್ಣ)**
**ಅಧ್ಯಕ್ಷರು ,**
**ನಗರಾಭಿವೃದ್ಧಿ ಪ್ರಾಧಿಕಾರ,**
**ಮಡಿಕೇರಿ.**

**ಸಹಿ/–**
**(ಶ್ರೀ ಅಜಾದ್ ಅಬ್ ರೆಹಮಾನ್ ಪರೀಖ್)**
**ಆಯುಕ್ತರು,**
**ನಗರಾಭಿವೃದ್ಧಿ ಪ್ರಾಧಿಕಾರ,**
**ಮಡಿಕೇರಿ.**

"ನಕಲು"

ಆಯುಕ್ತರು,
ನಗರಾಭಿವೃದ್ಧಿ ಪ್ರಾಧಿಕಾರ,
ಮಡಿಕೇರಿ.